**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕ : 23.01.2026**

**ಪಾಟೀ ಸವಾಲುಃ ಶ್ರೀ ಜಿ ಬಿ ಎಸ್ ವಕೀಲರಿಂದಃ**

1. ವಾದಿ ನನಗೆ ಮೊದಲಿನಿಂದಲೂ ಗೊತ್ತಿರುವವರು. ಸಾಕ್ಷಿ ಸ್ವತಃ ವಾದಿ ಮತ್ತು ಮೃತ 1 ನೇ ಪ್ರತಿವಾದಿ ಸಂಬಂಧಿಕರು ಎಂದು ಹೇಳುತ್ತಾರೆ. ವಾದಿಯ ಗ್ರಾಮಕ್ಕೂ ನನ್ನ ಗ್ರಾಮಕ್ಕು ಸುಮಾರು 3 ಕಿ ಮಿ ಅಂತರ ಇದೆ. 3 ವರ್ಷಗಳ ಹಿಂದೆಭೂ ವ್ಯವಹಾರ ನಡೆದಾಗ ನನ್ನನ್ನು ಉಗ್ರೇಗೌಡರು ಕರೆಸಿದ್ದರು ಆಗ ಈ ಹಣಕಾಸಿನ ವ್ಯವಹಾರ ನನಗೆ ತಿಳಿಯಿತು. ಈ ಹಣಕಾಸಿನ ವ್ಯವಹಾರಕ್ಕೆ ಶೆಟ್ಟಿಹಳ್ಳಿಯಲ್ಲಿ ಸೇರಿಸಿದ್ದೆವು. ನಾನು, ವಾದಿ, ಉಗ್ರೇಗೌಡ, ಅವರ ಹೆಂಡತಿ ಹಾಗೂ ಮಕ್ಕಳುಗಳು ಎಲ್ಲರು ಸೇರಿದ್ದೆವು. ಮಾತುಕತೆ ನಡೆದ ಎಷ್ಟು ದಿನಗಳ ನಂತರ ಕರಾರುಪತ್ರ ತಯಾರು ಆಯಿತು ಎಂದರೆ ಸಾಕ್ಷಿ ಕರಾರುಪತ್ರ ಮಾಡಿಕೊಂಡ ವಿಚಾರ ಗೊತ್ತಿಲ್ಲವೆಂದು ಹೇಳುತ್ತಾರೆ.

2. ನಿಮ್ಮ ಪ್ರಮಾಣಪತ್ರದ ಸಂಗತಿಗಳನ್ನು ಯಾರ ಹೇಳಿ ಬರೆಸಿರುತ್ತಾರೆ ಎಂದರೆ ಸಾಕ್ಷಿ ಸ್ವತಃ ಪ್ರಮಾಣಪತ್ರವನ್ನು ಓದಿ ಯಾರು ಬರೆಸಿದ್ದಾರೆಂದು ಗೊತ್ತಿಲ್ಲವೆಂದು ಹೇಳುತ್ತಾರೆ. ಭೂಮಿ ವ್ಯವಹಾರವಾಗುವಾಗ 2 ಮತ್ತು 3 ನೇ ಪ್ರತಿವಾದಿಗಳು ಇರಲಿಲ್ಲ ಎಂದರೆ ಸರಿಯಲ್ಲ. ಕರಾರುಪತ್ರವನ್ನು ವಾದಿ ಮತ್ತು 1 ನೇ ಪ್ರತಿವಾದಿಗಳು ಪರಸ್ಪರ ಸೇರಿ ಮಾಹಿತಿ ಕೊಟ್ಟು ಬರೆಸಿಕೊಂಡಿರುತ್ತಾರೆ. 2 ಮತ್ತು 3 ನೇ ಪ್ರತಿವಾದಿಗಳು ಗ್ರಾಮದಲ್ಲಿ ವಾಸ ಇಲ್ಲ ಎಂದರೆ ಸಾಕ್ಷಿ ಹಣ ಕೊಡುವಾಗ ಬಂದಿದ್ದರು ಎಂದು ಹೇಳುತ್ತಾರೆ. 3 ನೇ ಪ್ರತಿವಾದಿ ಈಗ್ಗೆ 10

*ವರ್ಷಗಳಿಂದ ಮೈಸೂರಿನಲ್ಲಿ ವಾಸವಿರುತ್ತಾರೆ ಎಂದರೆ ಸಾಕ್ಷಿ ಊರಿನಲ್ಲಿ ಹೊಸ ಮನೆ ಕಟ್ಟುತ್ತಿದ್ದಾರೆಂದು ಹೇಳುತ್ತಾರೆ. 2 ನೇ ಪ್ರತಿವಾದಿ ಮದುವೆ ನಂತರ ಗಂಡನ ಮನೆಯಲ್ಲಿ ವಾಸವಿರುತ್ತಾರೆ ಎಂದರೆ ಸಾಕ್ಷಿ ನೀವು ಹೇಳುತ್ತಿರುವುದು ಸುಳ್ಳು ಎಂದು ಹೇಳುತ್ತಾರೆ.*

*3. 2 ವತ್ತು 3 ನೇ ಪ್ರತಿವಾದಿಗಳು ಬೇರೆ ಕಡೆ ವಾಸ ಇರುವಾಗ ಮೃತ 1 ನೇ ಪ್ರತಿವಾದಿ ವಾದಿಯಿಂದ ಬಡ್ಡಿಗಾಗಿ ಹಣ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ವಾದಿ ಮೃತ ಉಗ್ರೇಗೌಡರ ಮನೆ ಬಳಿ ಹೋಗಿ ಗಲಾಟೆ ಮಾಡಿ ಒತ್ತಾಯಪೂರ್ವಕವಾಗಿ ಕರಾರುಪತ್ರವನ್ನು ಬರೆಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಮೃತ 1 ನೇ ಪ್ರತಿವಾದಿಯ ಹೆಂಡತಿ ವಾದಿ ಗಲಾಟೆ ಮಾಡಿದ ಹಿನ್ನೆಲೆಯಲ್ಲಿ ಪತ್ರ ಬರೆದುಕೊಟ್ಟ 1 ತಿಂಗಳ ಒಳಗಿನಲ್ಲಿಯೇ ಮರಣ ಹೊಂದಿರುತ್ತಾರೆ ಎಂದರೆ ಸಾಕ್ಷಿ ಸಂಸಾರದಲ್ಲಿ ನೆಮ್ಮದಿ ಇರಲಿಲ್ಲ ಸತ್ತರು ಎಂದು ಹೇಳುತ್ತಾರೆ. ನೀವು ಹೇಳುತ್ತಿರುವುದು ಸುಳ್ಳು ಎಂದು ಹೇಳುತ್ತಾರೆ. ಮೃತ ಉಗ್ರೇಗೌಡರವರ ಕುಟುಂಬದಲ್ಲಿ ಕಲಹ ಉಂಟಾಗಿರುವುದು ಈ ಕರಾರುಪತ್ರವನ್ನು ಒತ್ತಾಯದಿಂದ ಬರೆಸಿಕೊಂಡಿದ್ದರಿಂದ ಎಂದರೆ ಸಾಕ್ಷಿ ಸುಳ್ಳು ಎಂದು ಹೇಳುತ್ತಾರೆ. ಮೃತ ಉಗ್ರೇಗೌಡ ಮತ್ತು ಹೆಂಡತಿಗೆ ವಾದಿ ತೊಂದರೆ ಕೊಡುತ್ತಿರುವುದನ್ನು ನೋಡಿ ಪ್ರತಿವಾದಿ 2 ಮತ್ತು 3 ರವರು ಉಪ ನೊಂದಣಾಧಿಕಾರಿ ಕಚೇರಿಗೆ ಬಂದು ಕರಾರುಪತ್ರವನ್ನು ವಾದಿ ಹೆಸರಿಗೆ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಎಸ್ ಆರ್ ಒ ಕಚೇರಿಯಲ್ಲಿ ಯಾವುದೇ ಹಣ ನೀಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಅಲ್ಲೆ ಕೊಟ್ಟರು ಎಂದು ಹೇಳುತ್ತಾರೆ.*

4. ನಿಮ್ಮ ಸಮಕ್ಷಮ ವಾದಿ ಯಾವುದೇ ಹಣವನ್ನು ಮೃತ ಉಗ್ರೇಗೌಡರಿಗೆ ನೀಡಿಲ್ಲ ಎಂದರೆ ಸರಿಯಲ್ಲ. ನೀವು ಪುಟ್ಟೇಗೌಡರಿಗೆ ಹತ್ತಿರದ ಸಂಬಂಧಿಯಾಗಿರುವುದರಿಂದ ಅವರ ಪರವಾಗಿ ಸುಳ್ಳು ಸಾಕ್ಷಿ ಕೊಡುತ್ತಿದ್ದೀರಾ ಎಂದರೆ ಸರಿಯಲ್ಲ. 2 ಮತ್ತು 3 ನೇ ಪ್ರತಿವಾದಿಗಳು ಮೈಸೂರಿನಲ್ಲಿ ವಾಸ ಇದುದ್ದರಿಂದ ವಾದಿ ಜೊತೆಗೆ ಸಂಪರ್ಕದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಉಗ್ರೇಗೌಡ ಮತ್ತು ಅವರ ಹೇಂಡತಿ ಮರಣ ಹೊಂದಿದ ನಂತರ ಬಡ್ಡಿ ಹಣವನ್ನು ವಾದಿಗೆ ಕೊಡದೆ ಇದುದ್ದರಿಂದ ಈ ದಾವೆಯನ್ನು ಪ್ರತಿವಾದಿಗಳ ವಿರುದ್ಧ ದಾಖಲಿಸಿದ್ದಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳ ಬೆಲೆ ಪ್ರಸ್ತುತ ಹೆಚ್ಚಾಗಿದೆ ಎಂದರೆ ಸರಿ. ಸಾಕ್ಷಿ ಇರಬಹುದು ಎಂದು ಹೇಳುತ್ತಾರೆ. ನೀವು ವಾದಿ ಜೊತೆ ಷಾಮೀಲಾಗಿ ಪ್ರತಿವಾದಿಗಳ ಜಮೀನನ್ನು ಕಬಳಿಸಬೇಕೆಂಬ ಉದ್ದೇಶದಿಂದ ನಿಮ್ಮ ಪ್ರಮಾಣಪತ್ರದ ಸಂಗತಿಗಳನ್ನು ಸೃಷ್ಟಿಸಿಕೊಂಡು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ಕೊಡುತ್ತಿದ್ದೀರಾ ಎಂದರೆ ಸರಿಯಲ್ಲ. ನಿಮ್ಮ ಪ್ರಮಣಪತ್ರದಲ್ಲಿ ಹೇಳಿರುವಂತೆ ಶೆಟ್ಟಿಹಳ್ಳಿಯಲ್ಲಿ ವ್ಯವಹಾರ ನಡೆದಿಲ್ಲ, 2 ಮತ್ತು 3 ನೇ ಪ್ರತಿವಾದಿಗಳು ಬಂದಿರಲಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗೊಳಿಸಲಾಯಿತು.**

**ಓ ಹೇ ಕೇ ಸ ಇ ಒ**

**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ., ಪಾಂಡವಪುರ.**